**ಕರ್ನಾಟಕ ಸರ್ಕಾರ**

**ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಿ1(2).ಸ್ಥಾನಪನ್ನ ಬಡ್ತಿ/29/2014-15 ದಿನಾಂಕ: 19-05-2017

**ಜ್ಞಾಪನ**

ವಿಷಯ: ಸರ್ಕಾರಿ ಪ್ರೌಢಶಾಲಾ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡುವ ಬಗ್ಗೆ.

ಉಲ್ಲೇಖ:1. ಈ ಕಛೇರಿಯ ಪತ್ರದ ಸಮ ಸಂಖ್ಯೆ ದಿನಾಂಕ: 10-02-2016.

2. ಮಾನ್ಯ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಇಲಾಖಾ ಮುಂಬಡ್ತಿ ಸಭೆಯ ನಡವಳಿ ದಿನಾಂಕ: 14-09-2016

@@@@@@@

ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ಹುದ್ದೆಯಲ್ಲಿ ನಿಯಮ-32ರಡಿ ಕರ್ತವ್ಯ ನಿರ್ವಹಿಸುತ್ತಿರುವವರು ಹಾಗೂ ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಸರ್ಕಾರಿ ಪ್ರೌಢಶಾಲಾ ಮುಖ್ಯ ಶಿಕ್ಷಕರ ವೃಂದಕ್ಕೆ ಸ್ಥಾನಪನ್ನ ಬಡ್ತಿ ನೀಡಲು ಪ್ರಸ್ತಾವನೆಯನ್ನು ಉಲ್ಲೇಖ (1)ರ ಪತ್ರದಲ್ಲಿ ಕರೆಯಲಾಗಿತ್ತು. ಅದರಂತೆ ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಂದ ಬಂದಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅವುಗಳಲ್ಲಿ 159 ಅರ್ಹತೆಯುಳ್ಳ ಪ್ರಸ್ತಾವನೆಗಳೆಂದು ದಿನಾಂಕ: 14-09-2016 ರ ಇಲಾಖಾ ಮುಂಬಡ್ತಿ ಸಮಿತಿ ಸಭೆಯಲ್ಲಿ ಮಂಡಿಸಲಾಯಿತು. ಸಮಿತಿಯು ಅರ್ಹರಿರುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಅವುಗಳಲ್ಲಿ 110 ಆರ್.ಪಿ.ಸಿ ಮತ್ತು 09 ಎಲ್.ಸಿ (ಬಡ್ತಿ ಹುದ್ದೆಗಳು) ಹುದ್ದೆಗಳಿಗೆ ಗ್ರೂಪ್-ಬಿ ವೃಂದಕ್ಕೆ (ವೇತನ ಶ್ರೇಣಿ ರೂ.22800-43200) ಸ್ಥಾನಪನ್ನ ಬಡ್ತಿ ನೀಡಲು ತೀರ್ಮಾನಿಸಲಾಯಿತು. ಅದರಂತೆ ದಿನಾಂಕ: 15-09-2016ರಂದು ಬಡ್ತಿ ನೀಡಿ ಆದೇಶಿಸಲಾಯಿತು.

ದಿನಾಂಕ: 20-09-2016ರಂದು ಸ್ಥಳ ಆಯ್ಕೆ ಕೌನ್ಸಿಲಿಂಗ್ ನಡೆಸಲಾಯಿತು. ಹಾಜರಿದ್ದ 110 ಆರ್.ಪಿ.ಸಿ ವೃಂದದಲ್ಲಿನ ಶಿಕ್ಷಕರಲ್ಲಿ 92 ಶಿಕ್ಷಕರು ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ. ಎಲ್.ಸಿ ಹುದ್ದೆಗಳಿಗೆ ಮೀಸಲಿಟ್ಟ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿನ ಹುದ್ದೆಗಳು ಖಾಲಿ ಇಲ್ಲದ ಪ್ರಯುಕ್ತ ಎಲ್.ಸಿ ವೃಂದಕ್ಕೆ ಸ್ಥಳ ಆಯ್ಕೆ ಕೌನ್ಸಿಲಿಂಗ್‌ಗನ್ನು ತಡೆಹಿಡಿಯಲಾಗಿತ್ತು.

ಪ್ರಸ್ತುತ ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಗ್ರೂಪ್-ಬಿ ಮುಖ್ಯ ಶಿಕ್ಷಕರು ಮತ್ತು ತತ್ಸಮಾನ ವೃಂದದ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ನಿಲುವಿನ ಜೇಷ್ಠತೆಯ ಆಧಾರದ ಮೇಲೆ ಸ್ಥಳ ಆಯ್ಕೆ ಕೌನ್ಸಿಲಿಂಗ್ ನಡೆಸಿ ಬಿ.ಬಿ.ಎಂ.ಪಿ ವ್ಯಾಪ್ತಿಯಿಂದ ಹೊರಭಾಗಕ್ಕೆ ಸ್ಥಳ ಆಯ್ಕೆ ನೀಡಿ ಹುದ್ದೆಗಳನ್ನು ಖಾಲಿ ಮಾಡಿಕೊಡಲಾಗಿದ್ದು, ಈಗಾಗಲೇ ಬಡ್ತಿ ನೀಡಿರುವ 09 ಜನ ಎಲ್.ಸಿ ವೃಂದದ ಶಿಕ್ಷಕರಿಗೆ ದಿನಾಂಕ: 23-05-2017ರಂದು ಮಂಗಳವಾರ ಬೆಳಿಗ್ಗೆ 10.00 ಗಂಟೆಗೆ ಈ ಕಛೇರಿಯಲ್ಲಿ ಕೌನ್ಸಿಲಿಂಗ್ ನಡೆಸಲಾಗುವುದು. ಈಗಾಗಲೇ ಬಡ್ತಿ ಪಡೆದಿರುವ ಶಿಕ್ಷಕರು ತಪ್ಪದೇ ಕೌನ್ಸಿಲಿಂಗ್ ಗೆ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಳ್ಳುವಂತೆ ಈ ಮೂಲಕ ಸೂಚಿಸಿದೆ.

ಸ್ಥಳ ಆಯ್ಕೆಗೆ ಹಾಜರಾಗದ ಮತ್ತು ಗೈರು ಹಾಜರಾಗುವ ಶಿಕ್ಷಕರಿಗೆ ಡಮ್ಮಿ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗುವುದು ಎಂದು ಸೂಚಿಸಿದೆ.

[ಎಸ್. ಕಾತ್ಯಾಯನಿದೇವಿ]
ಜಂಟಿ ನಿರ್ದೇಶಕರು [ಆಡಳಿತ]

19/5/17

ಪ್ರತಿಯನ್ನು:-

1. ಬೆಂಗಳೂರು ಮತ್ತು ಮೈಸೂರು ವಿಭಾಗದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವಾನಿಸುತ್ತಾ ಕೆಳಕಂಡ ಪಟ್ಟಿಯಲ್ಲಿನ ಶಿಕ್ಷಕರುಗಳಿಗೆ ಸೂಚನೆ ನೀಡಿ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ತಿಳಿಸಲು ಸೂಚಿಸಿದೆ.
2. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ರವಾನಿಸುತ್ತಾ ನಿಮ್ಮ ವ್ಯಾಪ್ತಿಗೆ ಬರುವ ಶಿಕ್ಷಕರಿಗೆ ಸೂಚನೆ ನೀಡಿ ಕೌನ್ಸಿಲಿಂಗ್‌ಗೆ ಹಾಜರಾಗುವಂತೆ ತಿಳಿಸಲು ಸೂಚಿಸಿದೆ.
3. ಕಛೇರಿ ಪ್ರತಿ.

**ಅನುಬಂಧ-1**

**371 ಜೆ ಸ್ಥಳೀಯ ವೃಂದ**

| ಕ್ರ.ಸಂ | ಜೇ.ಸಂ | ಹೆಸರು ಮತ್ತು ಪದನಾಮ ಮತ್ತು ವಿಳಾಸ |
|---|---|---|
| 1 | 3 | ಎಸ್ ನಾಗರತ್ನ, ಸ.ಶಿ. ಸರ್ಕಾರಿ ಪ್ರೌಢಶಾಲೆ, ಸುಲ್ತಾನಪೇಟೆ, ಬೆಂಗಳೂರು |
| 2 | 6 | ಷಾಜಿಯಾ ಸಮರೀನ್, ಸ.ಶಿ, ಸರ್ಕಾರಿ ಪರೌಢಶಾಲೆ, ಅರಳೇಪೇಟೆ, ದಕ್ಷಿಣ ವಲಯ, ಬೆಂಗಳೂರು |
| 3 | 7 | ಕುಮಾರಗೌಡರ ಮಲ್ಲಿಕಾರ್ಜುನಗೌಡ, ಸ.ಶಿ, ಸರ್ಕಾರಿ ಪ್ರೌಢಶಾಲೆ, ಮತ್ತಿಹಳ್ಳಿ, ಹರಪನಹಳ್ಳಿ, ದಾವಣಗೆರೆ ಜಿಲ್ಲೆ |
| 4 | 8 | ಬಾರಿಕರ ಬಸವರಾಜ, ಸ.ಶಿ. ಸರ್ಕಾರಿ ಪ್ರೌಢಶಾಲೆ, ಗೋವೇರಹಳ್ಳಿ, ಹರಪನಹಳ್ಳಿ, ದಾವಣಗೆರೆ |
| 5 | 9 | ಅಬ್ದುಲ ರಹೀಮ, ಸ.ಶಿ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ, ಗ್ರಾಮೀಣ ವಲಯ, ವಿಜಯಪುರ |
| 6 | 10 | ವಿಜಯಲಕ್ಷ್ಮಿ, ಸ.ಶಿ, ಸರ್ಕಾರಿ ಪ್ರೌಢಶಾಲೆ, ಅಗರ, ಬೆಂಗಳೂರು ದಕ್ಷಿಣ ವಲಯ-3 |
| 7 | 28 | ಸೋಮಪ್ಪ ಬಿ ನಿಲೋಗಲ, ಸ.ಶಿ. ಸರ್ಕಾರಿ ಪ್ರೌಢಶಾಲೆ, ಕಡಬಗೆರೆ, ಹರಪನಹಳ್ಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ |
| 8 | 31 | ಶೋಭಾ ಜೆ, ಸ.ಶಿ, ಸರ್ಕಾರಿ ಪ್ರೌಢಶಾಲೆ, ಈಜೀಪುರ, ಬೆಂಗಳೂರು ಉತ್ತರ |
| 9 | 37 | ಬೀರಪ್ಪ ಪೂಜಾರ್, ಸ.ಶಿ, ಸರ್ಕಾರಿ ಪ್ರೌಢಶಾಲೆ, ಬುಕ್ಕಾಪಟ್ಟಣ, ಶಿರಾ ತಾ: ಮಧುಗಿರಿ ಜಿಲ್ಲೆ |

(ಎಸ್. ಕಾತ್ಯಾಯನಿದೇವಿ)
ಜಂಟಿ ನಿರ್ದೇಶಕರು [ಆಡಳಿತ]

19/5/17